ಛತ್ರ ಖಾಲಿ ಇದೆ
ಶ್ರೀ ಪಿ.ಕೆ.ವಿ. ಆಚಾರ್ಯ ಸಭಾ ಭವನ
ನಂ. ಸಿ.ಎ 19, ದಟ್ಟಗಳ್ಳಿ, 3ನೇ ಹಂತ, ಕನಕದಾಸನಗರ, ಮೈಸೂರು
ನೂತನವಾಗಿ ನಿರ್ಮಿಸಿರುವ ಕಲ್ಯಾಣ ಮಂಟಪ
ಅತ್ಯುತ್ತಮ ಸೌಕರ್ಯವುಳ್ಳ ಕಲ್ಯಾಣ ಮಂಟಪ 1000 ಜನ ಕೂರುವ ಉತ್ತಮ ಸಭಾಂಗಣ, 600 ಜನ ಕೂರುವ ಡೈನಿಂಗ್ ಹಾಲ್, ರಿಸೆಪ್ಷನ್‌ಗಾಗಿ ದೊಡ್ಡದಾದ ವೇದಿಕೆ, ಸುಂದರವಾದ ಮದುವೆ ಮಂಟಪ ಮತ್ತು 12 ರೂಂಗಳನ್ನು ಒಳಗೊಂಡ ಕಲ್ಯಾಣ ಮಂಟಪ ದೊರೆಯುತ್ತದೆ.
ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ
ಛತ್ರ ಖಾಲಿ ಇದೆ
Ph: 0821- 2542099, M: 9880013585

ಆಂದೋಲನ
ದಿನಪತ್ರಿಕೆ
ಸಂಪಾದಕ : ರಾಜಶೇಖರ ಕೋಟಿ

The Badsha's Pride
ವಿನ್ಯಾಸ ನಮ್ಮದು
STYLE ನಿಮ್ಮದು
BANNIMANTAP MAIN ROAD, MYSORE PH: 4000010

ಅಮೆರಿಕನ್ ಓಪನ್ ಗ್ರ್ಯಾಂಡ್ ಸ್ಲಾಮ್ ಟೆನ್ನಿಸ್ ಟೂರ್ನಮೆಂಟ್‌ನಲ್ಲಿ ಚೀನಾದ ಶೂಯಿ ಪೆಂಗ್ ಜೊತೆ ಕಣಕ್ಕಿಳಿದಿದ್ದ ಭಾರತದ ಅಗ್ರ ಮಹಿಳಾ ಡಬಲ್ಸ್ ಆಟಗಾರ್ತಿ ಸಾನಿಯಾ ಮಿರ್ಜಾ ಅವರು ಅಂತಿಮ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿದ್ದಾರೆ.

ಅಮೆರಿಕನ್ ಓಪನ್ ಟೆನ್ನಿಸ್ ಫೈನಲ್‌ಗೆ ಸಾನಿಯಾ

೧೦ ವರ್ಷ ಕ್ರಿಕೆಟ್ ಆಡಲು ಬಯಸುತ್ತೇನೆ

ಪ್ರಸ್ತುತ ಆಡುತ್ತಿರುವ ಉತ್ತಮ ಆಟವನ್ನು ಮುಂದಿನ ಹತ್ತು ವರ್ಷ ಕಾಲ ಆಡಲು ಬಯಸುತ್ತೇನೆ. ನಾನು ಉತ್ತಮವಾಗಿ ಆಡಲು ಕಠಿಣ ಅಭ್ಯಾಸ ನಡೆಸುತ್ತೇನೆ ಎಂದು ವಿರಾಟ್ ಕೊಹ್ಲಿ ಹೇಳಿದ್ದಾರೆ.

ಗರಿಷ್ಠ: ೨೭° । ಕನಿಷ್ಠ: ೧೭°
ಮೋಡಕವಿದ ವಾತಾವರಣ ಸಾಧಾರಣ ಮಳೆ ಸಂಭವ

ಸಂಪುಟ: ೪೬ ಸಂಚಿಕೆ: ೨೪೩, ರಾಷ್ಟ್ರೀಯ ಶಕ ೧೯೩೯ ಶರತ್ –ಭಾದ್ರಪದ ೧೯ ● ಚೌತಿ ಪಂಚಮಿ– ಅಶ್ವಿನಿ, ಭಾನುವಾರ, ಸೆ.೧೦, ೨೦೧೭, ದೂರವಾಣಿ: ೨೪೪೯೫೦೧, ೨೪೪೯೫೦೪, ೨೪೪೯೫೦೫, ಫ್ಯಾಕ್ಸ್: ೨೪೪೯೫೦೩, ಪುಟ: ೧೨+೪, ರೂ. ೩

- ಶಾಲೆಯಲ್ಲಿ ಜಾಗೃತಿ ಮೂಡಿಸಲು ಶಿಕ್ಷಣ ಇಲಾಖೆ ಉಪನಿರ್ದೇಶಕರ ಸೂಚನೆ
- ತಾಲ್ಲೂಕು, ಹೋಬಳಿ ಮಟ್ಟದಲ್ಲೂ ಸಮಾಲೋಚನೆಗಾಗಿ ತಂಡಗಳ ರಚನೆ

ಭಯಾನಕ ಬ್ಲೂವೇಲ್ ಜಾಗೃತಿಯ ಮದ್ದಿಗೆ ಸಿದ್ಧತೆ



೧ ಪ್ರಾರ್ಥನೆ ಸಮಯದಲ್ಲಿ, ತರಗತಿಗಳಲ್ಲಿ, ಬಿಡುವಿನ ಸಮಯದಲ್ಲಿ ಶಿಕ್ಷಕರು ಅರಿವು ಮೂಡಿಸಬೇಕು

೨ ಮಕ್ಕಳು ಕೈ ಮೇಲೆ ಏನಾದರೂ ಬರೆದುಕೊಂಡಿದ್ದರೆ ಅದನ್ನು ಗಮನಿಸಿ ಸಮಾಲೋಚನೆ ನಡೆಸಬೇಕು

೩ ಮಕ್ಕಳು ಕೈಮೇಲೆ ಗಾಯ ಮಾಡಿಕೊಂಡಿದ್ದರೆ ಅದರ ಬಗ್ಗೆ ವಿಚಾರಿಸಿ ಪರಿಶೀಲಿಸಬೇಕು

೪ ಒತ್ತಡಕ್ಕೆ ಒಳಗಾದಂತೆ ಕಂಡು ಬಂದ ಮಕ್ಕಳೊಂದಿಗೆ ಶಿಕ್ಷಕರು ಸಮಾಲೋಚನೆ ನಡೆಸಬೇಕು

ದೇಶದಲ್ಲಿ ೫೦ಕ್ಕೂ ಹೆಚ್ಚು, ವಿಶ್ವದಲ್ಲಿ ೧೩೦ಕ್ಕೂ ಹೆಚ್ಚು ಬಲಿ

ಪೋಷಕರೇ ಎಚ್ಚರ! ನಿಮ್ಮ ಮಕ್ಕಳು ಹೆಚ್ಚು ಹೊತ್ತು ಮೊಬೈಲ್ ಗೇಮ್‌ನಲ್ಲಿ ತೊಡಗಿದ್ದರೆ ಒಮ್ಮೆ ನೀವೂ (ಪೋಷಕರು) ಪರೀಕ್ಷಿಸಿ. ಬ್ಲೂವೇಲ್‌ನಂಥ ಭಯಾನಕ ಆಟಕ್ಕೆ ಸಿಕ್ಕಿಬೀಳದಂತೆ ಗಮನಹರಿಸಿ.

ಮೈಸೂರು,ಸೆ.೯– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಮಕ್ಕಳು 'ಬ್ಲೂವೇಲ್' ಎಂಬ ಭಯಾನಕ ಆಟದ ಬಗ್ಗೆ ರಾಜ್ಯದಲ್ಲೇ ಅತಿ ಹೆಚ್ಚು ಹುಡುಕಾಟ ನಡೆಸಿದ್ದು, ಈ ಅಪಾಯ ಅರಿತ ಸಾರ್ವಜನಿಕ ಶಿಕ್ಷಣ ಇಲಾಖೆ ಶಾಲಾ ಮಕ್ಕಳಿಗೆ ಬ್ಲೂವೇಲ್ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಸುತ್ತೋಲೆ ಹೊರಡಿಸಿದೆ.

ಗ್ರಾಮೀಣ ಹಾಗೂ ನಗರ ಪ್ರದೇಶದ ಸರ್ಕಾರಿ ಶಾಲೆಗಳ ಮಕ್ಕಳು ಭಯಾನಕ ಬ್ಲೂವೇಲ್ ಆಟಕ್ಕೆ ಸಿಕ್ಕಿಬೀಳದಂತೆ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಮೈಸೂರು ಜಿಲ್ಲೆಯಲ್ಲಿ ಮಕ್ಕಳಿಗೆ ಜಾಗೃತಿ ಮೂಡಿಸಲು ನಿರ್ಧರಿಸಲಾಗಿದೆ.

ಇಷ್ಟೇ ಅಲ್ಲದೆ, ಮಕ್ಕಳೊಂದಿಗೆ ಸಮಾಲೋಚನೆ ನಡೆಸಲು ನಗರ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲೂ ತಂಡಗಳನ್ನು ರಚಿಸಲಾಗಿದ್ದು, ಸೋಮವಾರದಿಂದ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಿವೆ. ಈ ಸಮಾಲೋಚನಾ ತಂಡಗಳಲ್ಲಿ ಮನಃಶಾಸ್ತ್ರಜ್ಞರು, ಬಿಇಒ, ಶಿಕ್ಷಕರು ಇರಲಿದ್ದಾರೆ.

ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ ಇರುವ ಒಟ್ಟು ೩,೩೮೭ ಶಾಲೆಗಳಲ್ಲಿ ಅಪಾಯಕಾರಿ ಬ್ಲೂವೇಲ್ ಆಟದ ಬಗ್ಗೆ ಜಾಗೃತಿ ಮೂಡಿಸುವಂತೆ ಜಿಲ್ಲೆಯ ೯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಡಿಡಿಪಿಐ ಡಾ.ಬಿ.ಕೆ.ಎಸ್.ವರ್ಧನ್ ತಿಳಿಸಿದ್ದಾರೆ.

ಆತಂಕದ ವಿಷಯ: ರಾಜ್ಯದಲ್ಲಿ ಬೆಂಗಳೂರು ನಗರವನ್ನೂ ಮೀರಿಸಿ ಮೈಸೂರು ಬ್ಲೂವೇಲ್ ಆಟ ಹುಡುಕಾಟದಲ್ಲಿ ಮೊದಲ ಸ್ಥಾನದಲ್ಲಿರುವ ಆತಂಕಕಾರಿ ಸಂಗತಿ ಬೆಳಕಿಗೆ ಬಂದಿದೆ. ರಾಜ್ಯದಲ್ಲಿ ೨ನೇ ಸ್ಥಾನದಲ್ಲಿರುವ ಬೆಂಗಳೂರು ದೇಶದಲ್ಲಿ ೨೩ನೇ ಸ್ಥಾನದಲ್ಲಿದೆ; ಮೈಸೂರು ದೇಶದಲ್ಲಿ ೯ನೇ ಸ್ಥಾನದಲ್ಲಿದೆ.

ಎಲ್ಲಾ ಶಾಲೆಗಳಲ್ಲಿ ಮಕ್ಕಳಿಗೆ ಬ್ಲೂವೇಲ್ ಆಟದ ಅಪಾಯದ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲೂ ವಿಶೇಷ ಜಾಗೃತಿ ಮೂಡಿಸಲು ಕ್ರಮ ಕೈಗೊಂಡಿದ್ದೇವೆ.
–ಡಾ.ಬಿ.ಕೆ.ಎಸ್.ವರ್ಧನ್, ಡಿಡಿಪಿಐ

ಮಕ್ಕಳ ಸಹಾಯವಾಣಿ ಸಂಖ್ಯೆ ೧೦೯೮ಗೆ ಕರೆಮಾಡಿ ನೆರವು ಪಡೆಯಬಹುದು.

ಕಳೆದ ೩ ತಿಂಗಳಿಂದ ಮೈಸೂರು ನಗರದಲ್ಲಿ ಭಯಾನಕ ಬ್ಲೂವೇಲ್ ಗೇಮ್‌ಗಾಗಿ ಮೈಸೂರಿನಲ್ಲಿ ಅತಿ ಹೆಚ್ಚು ಮಂದಿ ತೀವ್ರ ಹುಡುಕಾಟ ನಡೆಸಿರುವುದು ಕಂಡು ಬಂದಿದೆ.

ಬ್ಲೂವೇಲ್ ಗೇಮ್‌ಗಾಗಿ ಆನ್‌ಲೈನ್‌ನಲ್ಲಿ ಶೋಧ ನಡೆಸಿದವರಲ್ಲಿ ರಾಜ್ಯದಲ್ಲಿ ಮೈಸೂರಿನವರೇ ಹೆಚ್ಚು ಎಂದು ಗೂಗಲ್ ಸರ್ಚ್ ಇಂಜಿನ್ ತಿಳಿಸಿದೆ. ಇದರಲ್ಲಿ ಕೇವಲ ಗೇಮ್‌ಗಾಗಿ ಶೋಧ ನಡೆಸಿದವರಲ್ಲ, ಗೇಮ್ ಬಗ್ಗೆ ತಿಳಿದುಕೊಳ್ಳುವವರು ಹಾಗೂ ಗೇಮ್‌ನಿಂದ ಹೊರ ಬರುವುದು ಹೇಗೆ ಎಂದು ತಿಳಿಯಲು ಅಂತರ್ಜಾಲ ಜಾಲಾಡಿದವರೂ ಇದ್ದಾರೆ.

ಆತ್ಮಹತ್ಯೆಗೆ ಯುವತಿ ಯತ್ನ: ಬ್ಲೂವೇಲ್ ಆಟದ ಕೊನೆಯ ಹಂತ ತಲುಪಿ ೨ ಬಾರಿ ಆತ್ಮಹತ್ಯೆಗೆ ಯತ್ನಿಸಿ ರಕ್ಷಿಸಲ್ಪಟ್ಟಿದ್ದ ರಾಜಸ್ತಾನದ ಜೋಧ್‌ಪುರದ ೧೭ ವರ್ಷದ ಯುವತಿ ಬುಧವಾರ ಮತ್ತೆ ಆತ್ಮಹತ್ಯೆಗೆ ಯತ್ನಿಸಿದ್ದಾಳೆಂದು ತಿಳಿದುಬಂದಿದೆ.

ಬ್ಲೂವೇಲ್ ಚಾಲೆಂಜ್‌ನ ಕೊನೆಯ ಹಂತ ತಲುಪಿದ್ದ ಜೋಧ್‌ಪರ ಯುವತಿ ತಾನು ಟಾಸ್ಕ್ ಪೂರ್ಣಗೊಳಿಸದಿದ್ದರೆ ಆಟದ ನಿರ್ವಾಹಕರು ತಾಯಿಯನ್ನು ಕೊಲ್ಲುತ್ತಾರೆಂಬ ಭೀತಿಯಲ್ಲಿ ಕೆರೆಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದಳು. ಆದರೆ, ಸ್ಥಳದಲ್ಲಿದ್ದ ವಾಹನ ಚಾಲಕರು ಯುವತಿಯನ್ನು ರಕ್ಷಣೆ ಮಾಡಿ, ಆಸ್ಪತ್ರೆಗೆ ದಾಖಲಿಸಿದ್ದರು.

ಈಗ ಸೆ.೮ರಂದು ಯುವತಿ ಆಸ್ಪತ್ರೆಯಲ್ಲಿ ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡು ಮತ್ತೆ ಆತ್ಮಹತ್ಯೆಗೆ ಯತ್ನಿಸಿದ್ದಾಳೆಂದು ತಿಳಿದುಬಂದಿದೆ.

ಈ ನಡುವೆ ಪಂಜಾಬ್‌ನಲ್ಲೂ ಆತ್ಮಹತ್ಯೆಗೆ ಯತ್ನಿಸುತ್ತಿದ್ದ ಬಾಲಕನೊಬ್ಬನನ್ನು ರಕ್ಷಣೆ ಮಾಡಲಾಗಿದೆ.

ಚುರುಕುಗೊಂಡ ಗೌರಿ ಹತ್ಯೆ ತನಿಖೆ

ನೆರೆ ರಾಜ್ಯಕ್ಕೆ ಎಸ್‌ಐಟಿ

ಬೆಂಗಳೂರು,ಸೆ.೯– ಕರ್ನಾಟಕವನ್ನೇ ತಲ್ಲಣಗೊಳಿಸಿದ ಪತ್ರಕರ್ತೆ, ಸಾಮಾಜಿಕ ಹೋರಾಟಗಾರ್ತಿ ಗೌರಿ ಲಂಕೇಶ್ ಹತ್ಯೆ ಪ್ರಕರಣವನ್ನು ಭೇದಿಸಲು ವಿಶೇಷ ತನಿಖಾ ದಳ (ಎಸ್‌ಐಟಿ)ದ ೩ ತಂಡಗಳು ಹೊರ ರಾಜ್ಯಗಳಿಗೆ ತೆರಳಿವೆ.

ಆಂಧ್ರಪ್ರದೇಶ, ಕೇರಳ, ತೆಲಂಗಾಣ, ಮಹಾರಾಷ್ಟ್ರಕ್ಕೆ ತೆರಳಿರುವ ತನಿಖಾ ತಂಡಗಳು ಬಲಪಂಥೀಯ ಹಾಗೂ ಎಡ ಪಂಥೀಯ ಕೆಲವು ಸಂಘಟನೆಗಳ ಪ್ರಮುಖ ನಾಯಕರ ಬಗ್ಗೆ ಮಾಹಿತಿ ಕಲೆ ಹಾಕುತ್ತಿವೆ.

ಶುಕ್ರವಾರವೇ ತನಿಖಾ ತಂಡಗಳು ಹೊರ ರಾಜ್ಯಗಳಿಗೆ ತೆರಳಿದ್ದು, ಎಡ ಹಾಗೂ ಬಲ ಪಂಥೀಯರಿಂದಲೂ ಗೌರಿ ಲಂಕೇಶ್‌ಗೆ ಪ್ರಾಣ ಬೆದರಿಕೆ ಇತ್ತೇ ಎಂಬುದನ್ನು ಪರಿಶೀಲಿಸುತ್ತಿವೆ.

ಈ ಹಿಂದೆ ಮಹಾರಾಷ್ಟ್ರದಲ್ಲಿ ವಿಚಾರವಾದಿಗಳಾದ ದಾಭೋಲ್ಕರ್, ಗೋವಿಂದ ಪನ್ಸಾರೆ, ಎಂ.ಎಂ. ಕಲಬುರ್ಗಿ ಅವರನ್ನು ಹತ್ಯೆ ಮಾಡಿದವರೇ ಗೌರಿಯನ್ನೂ ಹತ್ಯೆ ಮಾಡಿರಬಹುದೆಂಬ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ತಂಡಗಳು ಹೊರ ರಾಜ್ಯಗಳಿಂದಲೂ ಮಾಹಿತಿ ಕಲೆ ಹಾಕುತ್ತಿವೆ.

ಮೇಲ್ನೋಟಕ್ಕೆ ಪ್ರಕರಣಗಳಲ್ಲಿ ಒಂದಕ್ಕೊಂದು ಸಾಮ್ಯತೆ ಕಂಡು ಬರುತ್ತಿರುವುದರಿಂದ ಗೌರಿಯನ್ನು ನಿರ್ದಿಷ್ಟ ಗುಂಪು ಕೊಲೆ ಮಾಡಿರುವ ಸಾಧ್ಯತೆಗಳಿರುವುದರಿಂದ ಬೇರೆ ಬೇರೆ ಆಯಾಮಗಳಲ್ಲಿ ತನಿಖೆ ಪ್ರಾರಂಭವಾಗಿದೆ.

ಎಂ.ಎಂ.ಕಲಬುರ್ಗಿಯವರನ್ನು ಹಂತಕರು ಹಣೆ ಮತ್ತು ಎದೆ ಭಾಗಕ್ಕೆ ಗುಂಡಿಕ್ಕಿ ಹತ್ಯೆ ಮಾಡಿದ್ದರು. ಕಳೆದ ಬುಧವಾರ ರಾತ್ರಿ ಗೌರಿಯನ್ನು ಕೂಡ ದುಷ್ಕರ್ಮಿಗಳು ಹಣೆ ಹಾಗೂ ಎದೆಯ ಭಾಗಕ್ಕೆ ಗುಂಡು ಹಾರಿಸಿ ಕಗ್ಗೊಲೆ ಮಾಡಿದ್ದರು.

⏭ ೮

೧೮ ಮಂದಿ ಗಣ್ಯರಿಗೆ ಭದ್ರತೆ

ಗೌರಿ ಲಂಕೇಶ್ ಹತ್ಯೆ ಹಿನ್ನೆಲೆಯಲ್ಲಿ ರಾಜ್ಯದ ೧೮ ಮಂದಿ ಲೇಖಕರು, ವಿಚಾರವಾದಿಗಳು ಹಾಗೂ ಪ್ರಗತಿಪರ ಚಿಂತಕರಿಗೆ ಸೂಕ್ತ ಭದ್ರತೆ ಒದಗಿಸುವಂತೆ ಗುಪ್ತಚರ ಇಲಾಖೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

ಗುಪ್ತಚರ ಇಲಾಖೆಯ ಸಲಹೆ ಮೇರೆಗೆ ಗಿರೀಶ್ ಕಾರ್ನಾಡ್, ಬರಗೂರು ರಾಮಚಂದ್ರಪ್ಪ, ಪಾಟೀಲ ಪುಟ್ಟಪ್ಪ, ಚೆನ್ನವೀರ ಕಣವಿ ಸೇರಿದಂತೆ ರಾಜ್ಯದ ೧೮ ಗಣ್ಯರಿಗೆ ಪೊಲೀಸರು ಭದ್ರತೆ ಒದಗಿಸಿದ್ದಾರೆ.

'ಸಿಬಿಐ ಬೇಡ ಎಸ್‌ಐಟಿಯೇ ಇರಲಿ'

ಯಾವುದೇ ಕಾರಣಕ್ಕೂ ಸಿಬಿಐ ತನಿಖೆ ಬೇಡ. ಎಸ್‌ಐಟಿ ತನಿಖೆ ಮುಂದುವರಿಯಲಿ ಎಂದು ಗೌರಿ ಲಂಕೇಶ್ ತಾಯಿ ಇಂದಿರಾ ಲಂಕೇಶ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಶನಿವಾರ ಮಧ್ಯಾಹ್ನ, ಇಂದಿರಾ ಲಂಕೇಶ್ ಅವರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಸಿಬಿಐ ತನಿಖೆಯಲ್ಲಿ ನಮಗೆ ನಂಬಿಕೆ ಇಲ್ಲ. ವಿಶೇಷ ತನಿಖಾ ತಂಡದಿಂದಲೇ ತನಿಖೆ ಮುಂದುವರಿಯಲಿ ಎಂದು ಕೋರಿದ್ದಾರೆ.

ಮೃಗಾಲಯಕ್ಕೆ ಹೊಸ ಅತಿಥಿಗಳು

ಮೈಸೂರು,ಸೆ.೯– ಪ್ರಾಣಿ ವಿನಿಮಯ ಕಾರ್ಯಕ್ರಮದಡಿ ಚಾಮರಾಜೇಂದ್ರ ಮೃಗಾಲಯಕ್ಕೆ ಇಂಡಿಯನ್ ರಾಕ್ ಪೈತಾನ್ (ಹೆಬ್ಬಾವು), ಗಾರಿಯಲ್ (ಮೊಸಳೆ) ನೂತನ ಅತಿಥಿಗಳ ಆಗಮನವಾಗಿದೆ.

ಹೊಸದಿಲ್ಲಿಯ ಕೇಂದ್ರ ಮೃಗಾಲಯ ಪ್ರಾಧಿಕಾರದ ಅನುಮೋದನೆಯಂತೆ ಮೈಸೂರು ಮೃಗಾಲಯವು ತಮಿಳುನಾಡಿನ ಮದ್ರಾಸ್ ಕ್ರೊಕೊಡೈಲ್ ಬ್ಯಾಂಕ್ ಟ್ರಸ್ಟ್‌ನಿಂದ ಪ್ರಾಣಿಗಳನ್ನು ಉಡುಗೊರೆ ರೂಪದಲ್ಲಿ ಪಡೆದುಕೊಂಡಿದೆ.

ಇಂಡಿಯನ್ ರಾಕ್ ಪೈತಾನ್ (ಹೆಬ್ಬಾವು) ೨ ಗಂಡು, ೨ ಹೆಣ್ಣು, ಗಾರಿಯಲ್ (ಮೊಸಳೆ) ೨ ಗಂಡು, ೩ ಹೆಣ್ಣು ಸ್ವೀಕರಿಸಲಾಗಿದೆ. ಸಂರಕ್ಷಣೆ ಮತ್ತು ಸಂತಾನಾಭಿವೃದ್ಧಿಗೋಸ್ಕರ ಸರೀಸೃಪಗಳನ್ನು ಸೆ.೬ರಂದು ಮೃಗಾಲಯಕ್ಕೆ ತರಲಾಗಿದ್ದು, ಅವುಗಳ ಆರೋಗ್ಯ ಸ್ಥಿರವಾಗಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಸಿ.ರವಿಶಂಕರ್ ತಿಳಿಸಿದ್ದಾರೆ.

ಸಾಂಸ್ಕೃತಿಕ ನಗರಿಗೆ ಮತ್ತೆರಡು ಪ್ರಶಸ್ತಿಯ ಗರಿ

ಬಯಲು ಶೌಚಮುಕ್ತ ನಗರ, ಟ್ರಿಣ್ ಟ್ರಿಣ್ ಯೋಜನೆಗೆ ಗೌರವ

ಹೊಸದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಾಪೌರ ಎಂ.ಜೆ.ರವಿಕುಮಾರ್ ಅವರು ಸ್ಕಾಚ್ ಆರ್ಡರ್ ಆಫ್ ಮೆರಿಟ್ ಸಂಸ್ಥೆಯಿಂದ ಪ್ರಶಸ್ತಿ ಸ್ವೀಕರಿಸಿದರು. ಜಿ. ಜಗದೀಶ್, ಡಾ. ನಾಗರಾಜ್ ಚಿತ್ರದಲ್ಲಿದ್ದಾರೆ.

ಮೈಸೂರು,ಸೆ.೯– ಸತತ ಎರಡು ಬಾರಿ ಸ್ವಚ್ಛನಗರಿ ಪ್ರಶಸ್ತಿಗೆ ಪಾತ್ರವಾಗಿದ್ದ ಸಾಂಸ್ಕೃತಿಕ ನಗರಿ ಮೈಸೂರು ಮತ್ತೆರಡು ಪ್ರಶಸ್ತಿಗಳ ಗರಿಯನ್ನು ತನ್ನ ಮುಡಿಗೇರಿಸಿಕೊಂಡಿದೆ.

ಸ್ಕಾಚ್ ಆರ್ಡರ್ ಆಫ್ ಮೆರಿಟ್ ಸಂಸ್ಥೆಯು ರಾಷ್ಟ್ರದಲ್ಲಿ ಬಯಲು ಶೌಚಮುಕ್ತವೆಂದು ಘೋಷಿತವಾಗಿರುವ ಅತ್ಯುನ್ನತ ೫೦ ನಗರಗಳಿಗೆ ಪ್ರಶಸ್ತಿ ನೀಡಿದ್ದು, ಅದರಲ್ಲಿ ಮೈಸೂರು ಕೂಡ ಪ್ರಶಸ್ತಿಗೆ ಭಾಜನವಾಗಿದೆ.

ದೇಶದಲ್ಲೇ ಮೊದಲ ಬಾರಿಗೆ ಮೈಸೂರಿನಲ್ಲಿ ಜಾರಿಯಾಗಿರುವ ಪರಿಸರ ಸ್ನೇಹಿ ಟ್ರಿಣ್ ಟ್ರಿಣ್ ಯೋಜನೆಗೂ ಪ್ರತ್ಯೇಕ ಪ್ರಶಸ್ತಿ ನೀಡಲಾಗಿದೆ. ಇದರಿಂದ ಮೈಸೂರಿಗೆ ಒಟ್ಟು ೨ ಪ್ರಶಸ್ತಿಗಳು ದೊರೆತಂತಾಗಿದೆ.

⏭ ೮

ಝಗಮಗಿಸಿದ ಜಲಪಾತೋತ್ಸವ

ಚುಂಚನಕಟ್ಟೆಯ ಧನುಷ್ಕೋಟಿಯಲ್ಲಿ ಸಾಂಸ್ಕೃತಿಕ ರಸದೌತಣ

ಕೆ.ಆರ್.ನಗರ,ಸೆ.೯– ಎಲ್ಲೆಂದರಲ್ಲಿ ಝಗಮಗಿಸುವ ವಿದ್ಯುತ್ ದೀಪಾಲಂಕಾರ, ಸಾಂಸ್ಕೃತಿಕ ರಸದೌತಣ ನೀಡಲು ಬೃಹತ್ ವೇದಿಕೆ, ಚಲನಚಿತ್ರ ತಾರೆಯರ ದಂಡು, ಕಾನೂನು ಮತ್ತು ಸುವ್ಯವಸ್ಥೆಗೆ ಪೊಲೀಸರ ಸರ್ಪಗಾವಲು, ಕತ್ತಲೆಯನ್ನು ನಾಚಿಸುವಂತಹ ವಿದ್ಯುತ್ ಬೆಳಕಿನ ಚಿತ್ತಾರದ ಮೋಡಿ...

ಇವಿಷ್ಟು ಚುಂಚನಕಟ್ಟೆಯ ಜಲಪಾತೋತ್ಸವದ ಮೊದಲ ದಿನದ ಕಾರ್ಯಕ್ರಮದಲ್ಲಿ ಕಂಡುಬಂದ ದೃಶ್ಯಗಳು.

ನೀರಿನ ಝುಳುಝುಳು ನಿನಾದದೊಡನೆ ಸ್ಪರ್ಧೆಗಿಳಿದಂತೆ ನರ್ತಿಸುತ್ತಿರುವ ಕಿರಣಗಳು ನೋಡುಗರನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿದ್ದವು. ತಂಪಾದ ಹವೆಯು ಮೈಮನವನ್ನು ಸಮತೋಲನದಲ್ಲಿ ಹಿಡಿದಿಡುವಂತೆ ಮಾಡಿ, ಇಡೀ ಜಲಪಾತೋತ್ಸವದ ಉಲ್ಲಾಸ ಆ ವಾತಾವರಣದ ಸೊಬಗನ್ನು ನೂರ್ಮಡಿಗೊಳಿಸಿತು.

ತಾಲ್ಲೂಕಿನ ಚುಂಚನಕಟ್ಟೆಯಲ್ಲಿ ಶನಿವಾರ ಸಂಜೆ ೫ ಗಂಟೆಗೆ ಧನುಷ್ಕೋಟಿ ಜಲಪಾತೋತ್ಸವ ಕಾರ್ಯಕ್ರಮಕ್ಕೆ ಚಲನಚಿತ್ರ ನಟ ವಿಜಯ ರಾಘವೇಂದ್ರ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಸರ್ಕಾರ ನಮ್ಮ ಕೆ.ಆರ್.ನಗರ ತಾಲ್ಲೂಕನ್ನು ಪ್ರವಾಸಿ ತಾಣವಾಗಿ ಮಾಡಲು ಹೊರಟಿರುವುದು ನಮ್ಮೆಲ್ಲರಿಗೂ ಸಂತಸದ ವಿಷಯವಾಗಿದೆ. ಅಲ್ಲದೆ ಚುಂಚನಕಟ್ಟೆ ಸುತ್ತಮುತ್ತ ಚಿತ್ರೀಕರಣ ನಡೆಸಲು ಸೂಕ್ತವಾದ ಪ್ರದೇಶಗಳಿವೆ.
–ವಿಜಯ ರಾಘವೇಂದ್ರ



ಚುಂಚನಕಟ್ಟೆ ಸಮೀಪದ ಕಾವೇರಿ ನದಿಯ ಧನುಷ್ಕೋಟಿ ಜಲಪಾತದಲ್ಲಿ ಆಯೋಜಿಸಿರುವ ಜಲಪಾತೋತ್ಸವಕ್ಕೆ ಶನಿವಾರ ಚಾಲನೆ ನೀಡಲಾಯಿತು. ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿರುವ ಜಲಪಾತದ ವೈಭವವನ್ನು ಚಿತ್ರದಲ್ಲಿ ಕಾಣಬಹುದು.

ಕಾರ್ಯಕ್ರಮ ಉದ್ಘಾಟನೆಗೂ ಮುನ್ನ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಡಾ.ಕಾ. ರಾಮೇಶ್ವರಪ್ಪ ಮತ್ತು ತಂಡದಿಂದ ಜಾನಪದ ಗೀತೆಗಳ ಗಾಯನ ನಡೆಯಿತು. ತಾಲ್ಲೂಕು ಆಡಳಿತದ ವತಿಯಿಂದ ಚಲನಚಿತ್ರ ನಟ ವಿಜಯ ರಾಘವೇಂದ್ರ ಅವರಿಗೆ ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು.

⏭ ೮